**ಸಾಕ್ಷಿಗೆ ದಿನಾಂಕ 15.09.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 3 ನೇ ಎದುರುದಾರರ ಪರ ಶ್ರೀ.ಕೆ.ಪಿ.ಎ. ವಕೀಲರಿಂದ:**

1. ಅಪಘಾತದ ಸಮಯಕ್ಕೆ ನನಗೆ 64 ವರ್ಷ ವಯಸ್ಸಾಗಿತ್ತು. ನಿಪಿ.13 ರ ಪ್ರಕಾರ ನನಗೆ 67 ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ. ಅಪಘಾತದ ದಿನ ನಾನು ನನ್ನ ತೋಟದ ಮನೆಯಿಂದ ಹುಲಿಬೆಲೆಗೆ ಹೋಗುತ್ತಿದ್ದೆ. ಅಪಘಾತದ ದಿನ ದ್ವಿಚಕ್ರ ವಾಹನವನ್ನು ನಾನೇ ಚಾಲನೇ ಮಾಡುತ್ತಿದ್ದೆ. ಸದರಿ ದ್ವಿಚಕ್ರ ವಾಹನ ಚಾಲನೇ ಮಾಡಲು ನನಗೆ ಚಾಲನಾ ಪರವಾನಗಿ ಇದೆ. ಸದರಿ ಚಾಲನಾ ಪರವಾನಗಿ ಪತ್ರ ಕಳೆದು ಹೋಗಿರುತ್ತದೆ. ಚಾಲನಾ ಪರವಾನಗಿ ಪತ್ರವನ್ನು ನನ್ನ ಮಗ ಕೊಡಿಸಿದ್ದನು, ಸದರಿ ದಾಖಲೆಯ ಎರಡನೇ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೇನು.

2. ಅಪಘಾತದ ರಸ್ತೆ ನೇರ ರಸ್ತೆ ಎಂದರೆ ಸರಿ. ಅಪಘಾತವು ಮುಖಾಮುಖಿ ಆಗಿದೆ ಎಂದರೆ ಒಂದನೇ ಎದುರುದಾರರ ವಾಹನದ ಚಾಲಕನು ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತಾನೆ. ಅಪಘಾತದ ನಂತರ ನನ್ನ ವಾಹನವನ್ನು ಪೊಲೀಸರು ಅಮಾನತುಪಡಿಸಿಕೊಂಡಿರುತ್ತಾರೆ. ನನ್ನ ದ್ವಿಚಕ್ರ ವಾಹನಕ್ಕೆ ವಾಹನದ ಇಂಜಿನ್ ಜಖಂಗೊಂಡಿತ್ತು. ನಿಪಿ.4 ಐಎಂವಿ ವರದಿಯಲ್ಲಿ ನನ್ನ ದ್ವಿಚಕ್ರ ವಾಹನದ ಮುಂಭಾಗ ಜಖಂಗೊಂಡಿದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ.

3. ಅಪಘಾತದ ನನ್ನ ಸೊಸೆ ಸುಮ ಎನ್ನುವವಳು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾಳೆ. ತದನಂತರ ಬೆಂಗಳೂರಿನ ಆ್ಯಸ್ಟರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾಳೆ. ಸದರಿ ಆಸ್ಪತ್ರೆಯಲ್ಲಿ 4-5 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಬೆನ್ನಿನ ಕೆಳಭಾಗದಲ್ಲಿ ಶಸ್ತ್ರಚಿಕಿತ್ಸೆ ಆಗಿರುತ್ತದೆ. ನನಗೆ ಶಸ್ತ್ರಚಿಕಿತ್ಸೆಯಾಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ್ಯಸ್ಟರ್ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಕನಕಪುರದ ಕನಕ

ಕ್ಲಿನಿಕ್ ನಲ್ಲಿ ಮುಂದುವರೆದ ಚಿಕಿತ್ಸೆ ಪಡೆಯುತ್ತಿದ್ದೇನೆ. ಕನಕ ಕ್ಲಿನಿಕ್ ನಲ್ಲಿ ಮುಂದುವರೆದ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ.

4. ನಿಪಿ.12 ವೈದ್ಯಕೀಯ ಬಿಲ್ಲಿನ ಕ್ರಮ ಸಂಖ್ಯೆ 2 ರ ಬಿಲ್ಲು ಸುರೇಶ್ ಎನ್ನುವವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ.12 ವೈದ್ಯಕೀಯ ಬಿಲ್ಲಿನ ಕ್ರಮ ಸಂಖ್ಯೆ 2 ರ ಪ್ರಕಾರ ನಡೆಯಲು ವಾಕರ್ ಖರೀದಿಸಿದ್ದು ಅದನ್ನು ಈ ದಿನ ನ್ಯಾಯಾಲಯಕ್ಕೆ ಅದನ್ನು ತಂದಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 4 ಮತ್ತು 6ನೇ ಖಂಡಿಕೆಯಲ್ಲಿ ನಮೂದು ಮಾಡಿರುವ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಮಗೆ ಸೇರಿದ 3 ಎಕರೆ ಜಮೀನು ನನ್ನ ತಂದೆಯ ಹೆಸರಿನಲ್ಲಿದೆ. ಈಗಲೂ ನಾನು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪಹಣಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ.

5. ನಿಪಿ.12 ವೈದ್ಯಕೀಯ ಬಿಲ್ಲುಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಉಂಟಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ 1ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರುಹಾಜರು. ಈ ಕಾರಣದಿಂದ ವಾಟೀಸವಾಲು ಇಲ್ಲ ತೆಗೆದುಕೊಳ್ಳಲಾಗಿರುತ್ತದೆ.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**